Regd No B G. 155

Sri

8—9—1964

48 th Year
ನೇ ವರ್ಷ

★

Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ವಿ ಸುಬ್ಬರಾಯುರು [2 ನಪ್ಪೆ]

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಸ್ವರ್ಗಸುಖದಿಂದ ನರಕ ಯಾತನೆಗೆ !

ವ್ಯೂನಿಚ್ — ಏನೂ ಕೆಲಸಕಾರ್ಯ ಮಾಡದೆ ಸ್ವರ್ಗ ಸುಖ ಅನುಭವಿಸುವ ಮಾರ್ಗ ಕಂಡುಕೊಂಡ 28 ವರ್ಷದ ಜೋಸೆಫ್ ಫೈಡ್ರಿಕ್‌ನ ಸ್ವಾಂಸ್ಯೆ ಪ್ರಸಂಗ ವಿದು ; ದಿನ ರಾತ್ರಿ ಅಂಗಡಿ ಮುಚ್ಚುವ ಸಮಯದಲ್ಲಿ ಪ್ರಮುಖ ಅಂಗಡಿಯನ್ನು ಪ್ರವೇಶಿಸಿ, ಕಡೆಯ ನೌಕರನು ಹೊರಟುಹೋದನಂತರ ಅಲ್ಲಿದ್ದ ಬೇಕಾದುದನ್ನೆಲ್ಲಾ ತಿಂದು ಮದ್ಯ ಸೇವಿಸಿ, ಬೆಳಿಗ್ಗೆ ಅಂಗಡಿ ತೆರೆಯುವ ಹೊತ್ತಿಗೆ ಕ್ಯಾವರಾ ರೆಡಿಯೋ ಮುಂತಾದ್ದನ್ನು ಕದ್ದುತಂದ ಅಡ್ಡಿಟ್ಟು ದುಡ್ಡನ್ನು ಬಾಕಿ ಖರ್ಚಿಗೆ ಉಪಯೋಗಿಸಿಕೊಳ್ಳುತ್ತಲಿದ್ದನು : ಹೀಗೆ ಕೆಲ ದಿನ ನಡೆದನಂತರ ಒಂದು ದಿನ ಹೆಚ್ಚು ಮದ್ಯಸೇವಿಸಿದ್ದರಿಂದ ಬೆಳಿಗ್ಗೆ ಬೇಗ ಏಳಲಿಲ್ಲ ; ಅಂಗಡಿ ವ್ಯಾಪಾರ ಪ್ರಾರಂಭವಾದಾಗ ಇವನು ನಿದ್ರಿಸುತ್ತಿದ್ದ ಸಿಕ್ಕಿಬಿದ್ದ ; ಪೋಲೀಸರು ಬಂದು ಬಂಧಿಸಿ ಎಳೆದುಕೊಂಡು ಹೋದರು !

ರಾಬರ್ಟ್‌ಸನ್‌ಪೇಟೆ— ಫೀಜು ಬದಲಾವಣೆಗಾಗಿ ಮೊನ್ನೆ ಫಸ್ಟ್‌ಗ್ರೇಡು ಕಾಲೇಜಿನ 300 ವಿದ್ಯಾರ್ಥಿಗಳು ಘೋಷಣೆ ಮಾಡಿತ್ತಾ, ಮೆರವಣಿಗೆ ನಡೆಸಿದರು. — ವಿದ್ಯಾರ್ಥಿನಿಯರೂ ಭಾಗವಹಿಸಿದ್ದರು.

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ
ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ
9 ಬುಧವಾರ ತದಿಗೆ ಚಿತ್ತ
ಶ್ರೀ ಗೌರಿ ಗಣೇಶ ಹಬ್ಬ

ವಿಷಪ್ರಾಶನದಿಂದ ಮಹಿಳೆ ಮರಣ

ಮದರಾಸು—ಬೊಂಬಾಯಿ ರೈಲಿನ 1 ನೆಯ ತರಗತಿಯ ಕಂಪಾರ್ಟ್‌ಮೆಂಟಿನಲ್ಲಿ ಮೊನ್ನೆ ಪ್ರಯಾಣ ಮಾಡುತ್ತಿದ್ದ ಸೇಲಂಬಳಿಯ ಅತ್ಯಯಾಂಪಟಿಯ ಪಾಪಾತಿ ಎಂಬಾಕೆಯು ಜ್ಞಾನಶೂನ್ಯಳಾಗಿದ್ದುದಾಗಿ ದಾಡರ್ ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ತೀರಿಹೋದಳು. ಈಕೆಗೆ ಕೋರ್ಟ್ ವ್ಯವಹಾರದಲ್ಲಿ ಇತ್ತೀಚಿಗೆ ಅಧಿಕವಾಗಿ ಧನ ದೊರೆತಿದ್ದಿತೆಂದೂ, 30 ಸವನ ನಿನಭಂಗವಾಂದ ಒಡವೆಗಳು ಮೈಮೇಲೆ ಇದ್ದವೆಂದೂ ವಂದಿ ಆಗಿದೆ ಈಕೆಯು ಜೊತೆಯಲ್ಲಿ ಆ ಕಂಪಾರ್ಟ್‌ಮೆಂಟಿನಲ್ಲಿದ್ದ ಕಂದಸ್ವಾಮಿ ನಾಪತೆ ಆಗಿದ್ದಾನೆ ಈಕೆಯ ಸಾವು ವಿಷಪ್ರಾಶನ ಸಂಬಂಧಿಸಿದುದೆಂದು ಹೇಳಲಾಗಿದೆ.

★

ಪ್ರತಿಬಟನೆ

ದಕ್ಷಿಣ ಕೊರಿಯಾದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ವಿುತಿ ಮಾಡುವ ಹಾಗೂ ಪತ್ರಿಕೆಗಳ ಮೇಲೆ ಇಚ್ಛಾನುಸಾರ ಕ್ರಮ ತೆಗೆದುಕೊಳ್ಳುವ ಹೊಸ ಪತ್ರಿಕಾ ಶಾಸನವನ್ನು ಪ್ರತಿಭಟಿಸಿ ಅಂತರಾಷ್ಟ್ರೀಯ ಪತ್ರಿಕಾ ಸಂಸ್ಥೆಯ ಅಧ್ಯಕ್ಷರು ತಂತೀ ಕಳಿಸಿರುವುದಾಗಿ ಜಪಾನಿನ ವಾರ್ತೆ.

★

ಪ್ರವಾಹದ ಹಾವಳಿ

ಸವ ದೆಹಲಿಯಿಂದ ಬರಬಿರುವ ವರದಿಯ ಪ್ರಕಾರ ಧಾನಸ ಕಟ್ಟೆಯ ನಾನೂರು ಅಡಿ ಒಡರು ಹಾಗೂ ಅಲಿಪರ ಬ್ಲಾಕಿನ 8ನೆಯ ಜಂಡಿಯಲ್ಲಿ ಇನ್ನೂರು ಅಡಿಗಳ ಒಡಕನಿಂದ ದೆಹಲಿಯಲ್ಲಿ ಪ್ರವಾಹದ ನೀರು ಹೆಚ್ಚಾಗಿ ನುಗ್ಗುತ್ತಿದೆ.

ಈ ತಿಂಗಳೊಳಗೆ ಸಂಪೂರ್ಣವಾಗಿ ಸಕ್ಕರೆ ಕೊಳ್ಳಬಹುದೆ

ಈ ತಿಂಗಳು 30 ನೆಯ ತಾರೀಖಿನೊಳಗೆ ಮೈಸೂರು ನಗರದ ನಾಗರಿಕರು ತಮ್ಮ ಪೂರ್ಣವ ಸಕ್ಕರೆಯನ್ನು ಕಾರ್ಡ್‌ಗೆ ತೋರಿಸಿ ಪಡೆಯಬಹುದು ಗೌರಿ ಗಣೇಶನ ಹಬ್ಬಕ್ಕೆ ಪ್ರತಿ ಮನೆಗೆ ಅರ್ಧ ಕಿಲೊ ಸಕ್ಕರೆ ಕೊಡಲಾಗವದು

★

ಬೆಳೆಗೆ ನಷ್ಟ

ಆಳ್ವಾರು ಜಿಲ್ಲೆಯ ಮೂರು ಅಣೆಕಟ್ಟುಗಳು ಒಡೆದು ಜಿಲ್ಲೆಯ ಉತ್ತರ ಭಾಗದಲ್ಲಿ ಬೆಳೆ ಹಾಗೂ ಆಸ್ತಿಪಾಸ್ತಿಗೆ ತಕ್ಕಷ್ಟಿಗೆ ನಷ್ಟವಾಗಿದೆ ಎಂದು ಜಯಪುರ ವಾರ್ತೆ ತಿಳಿಸುತ್ತದೆ.

★

ಮಕ್ಕಳ ಸಾವು

ತಕುಂತಳ ಗೋವಿಂದಶೆಟ್ಟಿ ದೇಹ ಅಂಟಿದ್ದ ಅವಳಿಜವಳಿ ಮಕ್ಕಳನ್ನು ಪ್ರಸವಿಸಿದ್ದು ಸತ್ತುಹೋದವು ಎರಡು ಬೊಂಬಾಯಿನ ವಾರ್ತೆ

★

ಪ್ರಮುಖ ಸಮ್ಮೇಳನ

ಕೈರೋದಲ್ಲಿ ನಡೆಯಲಿರುವ ಕಟ್ಟಿಷ್ಠ ಉನ್ನತ ಮಟ್ಟದ ಸಮ್ಮೇಳನವು ಪ್ರಮುಖ ಸಮ್ಮೇಳನವಾಗುವುದೆಂದು ನವದೆಹಲಿಯಲ್ಲಿ ಪ್ರಧಾನಿ ಶ್ರೀ ಲಾಲ ಬಹಾದೂರ ಶಾಸ್ತ್ರಿ ತಿಳಿಸಿದರು.

★

ಬೆಳೆಗೆ ಹಾನಿ

ಮಳೆ ಹಾವಳಿಯಿಂದ ಕೆರೆಗಳುಕೊಡಿ ಬಿದ್ದು ಬೆಳೆಗೆ ನಷ್ಟವಾಗಿರುವುದಾಗಿ ಗೊಡಿಂಡ ವಾರ್ತೆ

ನಿಶೇಧಾಜ್ಞೆ

ನಿರಾಶ್ರಿತರ ಶಿಬಿರದಲ್ಲಿ ಅವಗಲಭೆ ಗಳಾಗದೆ ವನಧಿ ನಿರಾಶ್ರಿತರ ಶಿಬಿರ ಮತ್ತು ಸುತ್ತಮುತ್ತ 5 ಗ್ರಾಮಗಳಲ್ಲಿ 144 ನೇ ವಿಧಿ ಜಾರಿ ಆಗಿದೆ ಎಂದು ರಾಯ್ಪುರದ ವಂದಿ ತಿಳಿಸುತ್ತದೆ

★

ಜಯಂತಿ

ಈ ಮಾಹೆ 5 ರಂದು ರಾಷ್ಟ್ರಾಧ್ಯಕ್ಷ ರಾಧಾ ಕೃಷ್ಣನ್ 76 ನೆಯ ಜನ್ಮೋತ್ಸವ ಹಾಗೂ ಉಪಾಧ್ಯಾಯರ ದಿನಾಚರಣೆ ಮಹಾರಾಜ ಕಾಲೇಜಿನ ಉಪಾಧ್ಯಾಯರಿಂದ ಆಚರಿಸಲ್ಪಟ್ಟಿತು

❋

ಸಸ್ಪೆಂಡ್

ಗೊಂಡ ವಾರ್ಲಿಮೆಂಟರಿ ಕ್ಷೇತ್ರದ ಚುನಾವಣೆಯಲ್ಲಿ ಗೋಂಕಪುರದ ಕವಿ ಸಂಸ್ಥಾನದ ಶ್ರೀ ನಿಗಂವರು ಕೈವಾಡ ನಡೆಸಿದರೆಂದು ಅವರು ಸಸ್ಪೆಂಡು ಆಗಿರುವದಾಗಿ ಲಕ್ನೊ ವಾರ್ತೆ.

❋

ರಂಗೂನಿನ ಕೇಪ್ಟೌನ್ ಪತ್ರಿಕೆಯನ್ನು ಸರ್ಕಾರ ರಾಷ್ಟ್ರೀಕರಣ ಮಾಡಿತು

❋

ಹೈದರಾಬಾದು ಇನಾಂ ವಜಾ ಮಸೂದೆಗೆ ರಾಷ್ಟ್ರಾಧ್ಯಕ್ಷರು ಅನುಮತಿ ನೀಡಿದರು.

❋

ಮದರಾಸು ರಾಜ್ಯದ ಡಿ ಎಂ ಕೆ ಪಕ್ಷದಿಂದ ಪ್ರತ್ಯೇಕವಾದ ತಮಿಳು ರಾಷ್ಟ್ರೀಯ ಪಕ್ಷದ ಶ್ರೀ ಇ ವಿ ಕೆ ಸಂಪತ್ ನಾಯಕತ್ವದಲ್ಲಿ 53 ಸಾವಿರ ಮಂದಿ ಈ ವರಿಗೆ ಕಾಂಗ್ರೆಸ್ಸು ಸೇರಿರುವರು

⛃

ರಾಜಸ್ಥಾನದ ಬಡಕಿತ ವೆಚ್ಚದಲ್ಲಿ 75 ಲಕ್ಷ ರೂಪಾಯಿಗಳಷ್ಟು ಖೋತಾ ಮಾಡಲು ರಾಜ್ಯದ ಮಂತ್ರಿಮಂಡಲ ನಿರ್ಧರಿಸಿರುವದಾಗಿ ಜಯಪುರ ವಾರ್ತೆ

ಶಿಕ್ಷಕರ ದಿನಾಚರಣೆ

ನವದೆಹಲಿ— ಸಮಾಜವು ಅಜ್ಞಾನ, ಅನಕ್ಷರತೆಗಳ ವಿರುದ್ಧ ನಡೆಸುತ್ತಿರುವ ಹೋರಾಟದಲ್ಲಿ ಶಿಕ್ಷಕರ ಪಾತ್ರ ಮಹತ್ವಪೂರ್ಣವಾಗಿದೆಯೆಂದೂ ಶಿಕ್ಷಕರ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿಗೆ ನೆರವಾಗುವುದು ಸಮಾಜದ ಕರ್ತವ್ಯವೆಂದೂ ಪ್ರಧಾನ ಮಂತ್ರಿ ಶ್ರೀ ಲಾಲಬಹದ್ದೂರ ಶಾಸ್ತ್ರಿಗಳು ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.

ನೆಹರೂ ಭಾವಚಿತ್ರಕ್ಕೆ ರೂ 21 ಸಾವಿರ

ಕಲ್ಕತ್ತಾದಲ್ಲಿ ರಾಜಕಪೂರ ಅದ್ದೂರಿಯ ಚಿತ್ರ 'ಸಂಗಂ' ಚಿತ್ರದ ಪ್ರದರ್ಶನ ವೇಳೆಯಲ್ಲಿ ನಟ ರಾಜೇಂದ್ರಕುಮಾರನು ದಿವಂಗತ ನೆಹರೂರ ದೊಡ್ಡ ಚಿತ್ರವೊಂದನ್ನ ಎಲಂ ಹರಾಕೆದಾಗ ಶ್ರೀಮತಿ ಅಲಕ ಜರ್ಲ ಎಂಬುವರು ಅದನ್ನು ರೂ. 21 ಸಾವಿರಕ್ಕೆ ಪಡೆದುಕೊಂಡರು.

ಭಾರತದಲ್ಲಿ ಪ್ರಥಮ

1825— ಭಾರತದಲ್ಲಿ ಪ್ರಪ್ರಥಮವಾಗಿ ಲ್ಲಂಚೆಚೀಟು ಸಿಂಧ್ ನಲ್ಲಿ ಹೊಂಡಿಸಲ್ಪಟ್ಟಿತು

1851— ಪ್ರಥಮ ಟೆಲಿಗ್ರಾಫು ಲೈನು ಕಲ್ಕತ್ತಾ ಮತ್ತು ಡೈಮಂಡು ಹಾರ್ಬರು ನಡುವೆ ಅಕ್ಟೋಬರಿನಲ್ಲಿ ಪ್ರಾರಂಭವಾಯಿತು.

1853— ಮುಂಬೈ ವತ್ತ ಕಲ್ಯಾಣ್ ನಡುವೆ ರೈಲ್ವೇ ಬಂಡಿಯು ಆರಂಭವಾದುದು ; ಏಪ್ರಿಲ್ 16

1897-98— ಡಾರ್ಜಲಿಂಗಿನಲ್ಲಿ ಪ್ರಥಮ ವಿದ್ಯುತ್ ಉತ್ಪಾದನಾ ಯಂತ್ರದ ಸ್ಥಾಪನೆ.

1911— ಪ್ರಥಮ ಬಾರಿ ವಿಮಾನ ಟಪಾಲು ಪ್ರಾರಂಭ.

1925— ಮುಂಬಯಿ ಮತ್ತು ಕರಾಚಿ

1929— ವಿಮಾನ ಟಪಾಲಿನ ಪ್ರಥಮ ಅಂಚೆ ಚೀಟು ಭಾರತ ಮತ್ತು ಜಗತ್ತಿನ ಇತರ ಕಡೆಗಳಲ್ಲಿ ಹೊಂಡಿಸಲ್ಪಟ್ಟಿತು.

ದಿವ್ಯವಾಣಿ

ಯಾವುದನ್ನೂ ಕೇಳಬೇಡ, ಏನನ್ನೂ ಹಿಂದಕ್ಕೆ ಬಯಸಬೇಡ, ನಿನಗೆ ಏನು ಕೊಡಲು ಸಾಧ್ಯವಿದೆಯೋ ಅದನ್ನು ಕೊಡು : ಅದು ನಿನಗೆ ಹಿಂದೆ ಮರಳಿ ಬಂದೇ ಬರುತ್ತದೆ : ಆದರೆ ಅದರ ಬಗ್ಗೆ ಈಗ ಯೋಚಿಸಬೇಡ ; ಅದು ಬಹು ಮುಖವಾಗಿ ಸಹಸ್ರವಡಿಯುವಾಗಿ ಹಿಂದೆ ಬರುವುದು— ಆದರೆ ನಿನ್ನ ಗಮನ ಅದರ ಮೇಲಿರಕೂಡದು : ನಿನ್ನಲ್ಲಿ ಅದನ್ನು ಕೊಡುವ ಸಾಮರ್ಥ್ಯವಿರಬೇಕು ; ಕೊಡು, ಅಲ್ಲಿಗೆ ಅದು ಕೊನೆಗೊಳ್ಳುತ್ತದೆ. — ವಿವೇಕಾನಂದಸ್ವಾಮಿ



ಗೋರಕ್ಷಣೆ ಪ್ರಾಣದಯಾ ಕಾರ್ಯಗಳು ಹೆಚ್ಚಿಚ್ಚಾಗಿ ಪಡೆಯಲಿ

ವುಡ್‌ಲಾಂಡ್ ಜನಪ್ರಿಯ 2 ನೇ ವಾ
ಶಿ ಸು
ಹೋಮಿ ವಾಡಿಯಾರವರ ಈಸ್ಟ್‌ಮನ್ ಕಲರಿನ
.... ಅದ್ಭುತ ದೃಶ್ಯವೈಭವಗಳಿಂದ ಕೂಡಿದ ಮನಮೋಹಕ ಹಿಂದಿ ಚಿತ್ರ ....
ಚಾರ್ ದರ್ವೇಶ್ Char Darvesh
ಭೂಮಿಕೆಯಲ್ಲಿ— ಫಿರೋಜಖಾನ್, ಸಯೀದಾ ಖಾನ್, ನಾಜ್
[ದಿನವಹಿ 3 ಪ್ರದರ್ಶನಗಳು]

ಅಪೆರಾ— 4-9-64 ರಿಂದ
ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]
ನ ತ ಶ ಕ
ಪಾತ್ರಧಾರಿಗಳು— ರಾಜಕುಮಾರ್, ನಾಗೇಶ್ವರರಾವ್, ಜಾನಕಿ, ರಾಜಮ್ಮ

SHAKTI
SUDHA
Superb Tonic

Help The ' Gorakshana'
" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ
ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ
ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.
' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು
ವಾರ್ಷಿಕ ಚಂದಾ 50 ನ ಪೈ
ಅಭಿನಂದನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)
ವಿಳಾಸ- ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4
ಚಂದಾ ಬಾಕಿಯಿದೆ ಮುಗಿದಿರುವವರು ದಯವಿಟ್ಟು ಪ್ರಗತಿ ಮಾಡಬೇಕಾಗಿ ವಿನಂತಿ ; ಅಭಿನಂದನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4.